(ಸದನದ ಕಾರ್ಯಕಲಾಪವು ಬೆಳಿಗ್ಗೆ 11.10 ಗಂಟೆಗೆ ಪ್ರಾರಂಭವಾದಾಗ ಮಾನ್ಯ ಸಭಾಧ್ಯಕ್ಷರು ಅಧ್ಯಕ್ಷ ಪೀಠದಲ್ಲಿ ಉಪಸ್ಥಿತರಿದ್ದರು)

ಅಧ್ಯಕ್ಷರು:– ಒಂದು ನಿಮಿಷ, ಒಂದು ಅಭಿನಂದನೆಯನ್ನು ಸಲ್ಲಿಸಿಬಿಡುತ್ತೇನೆ.

ಅಭಿನಂದನೆ

"ದೇಶೀಯ ಕ್ರಿಕೆಟ್‌ನ ರಣಜಿ ಟ್ರೋಫಿಯಲ್ಲಿ ಸತತ ಎರಡನೇ ಬಾರಿಗೆ ಚಾಂಪಿಯನ್ ಆಗಿ ಸಾರ್ವಭೌಮತ್ವವನ್ನು ಸಾಬೀತುಪಡಿಸಿದ ಕರ್ನಾಟಕ ತಂಡವು ಒಟ್ಟಾರೆ ಎಂಟನೇ ಬಾರಿಗೆ ಪ್ರಶಸ್ತಿಯನ್ನು ಮುಡಿಗೇರಿಸಿಕೊಂಡು ಮುನ್ನಡೆಯ ಗೆಲುವು ಸಾಧಿಸಿ ವಿಶೇಷ ಗೌರವಕ್ಕೆ ಪಾತ್ರವಾಗಿದೆ.

ಇತಿಹಾಸದಲ್ಲಿ ಅಪೂರ್ವ ಸಾಧನೆಯನ್ನು ಮಾಡಿರುವ ಶ್ರೀ ಆರ್. ವಿನಯಕುಮಾರ್ ನಾಯಕತ್ವದ ಕರ್ನಾಟಕ ಕ್ರಿಕೆಟ್ ತಂಡದ ಪರಿಶ್ರಮವನ್ನು ಈ ಸದನವು ಹೃತ್ಪೂರ್ವಕವಾಗಿ ಅಭಿನಂದಿಸುತ್ತದೆ."

ಇನ್ನೊಂದು ರೂಲಿಂಗ್ ಇದೆ. ಅದನ್ನು ಹೇಳಿಬಿಡುತ್ತೇನೆ. ಇದು ಬಜೆಟ್‌ಗೆ ಸಂಬಂಧಪಟ್ಟಂತೆ ಇದೆ.

2. ಸಭಾಧ್ಯಕ್ಷರ ನಿರ್ಣಯ

ವಿಷಯ:– ಇಲಾಖಾವಾರು ಕಾರ್ಯನಿರ್ವಹಣಾ ವರದಿ ಹಾಗೂ ವಾರ್ಷಿಕ ವರದಿಯನ್ನು ಒದಗಿಸುವ ಬಗ್ಗೆ.

"2015–16ನೇ ಸಾಲಿನ ಆಯವ್ಯಯವನ್ನು ದಿನಾಂಕ: 13.03.2015 ರಂದು ವಿತ್ತ ಸಚಿವರೂ ಆದ ಮಾನ್ಯ ಮುಖ್ಯಮಂತ್ರಿಗಳು ಸದನದಲ್ಲಿ ಮಂಡಿಸಿದ್ದು, ಜುಲೈ 31 ರವರೆಗೆ ಅಂದರೆ ನಾಲ್ಕು ತಿಂಗಳಿಗೆ ಲೇಖಾನುದಾನವನ್ನು ಮಂಜೂರು ಮಾಡಬೇಕೆಂದು ಕೋರಿರುತ್ತಾರೆ. ಈಗ ಆಯವ್ಯಯದ ಮೇಲೆ ಸಾಮಾನ್ಯ ಚರ್ಚೆಯು ಪ್ರಾರಂಭವಾಗಲಿದೆ, ಈ

ಹಂತದಲ್ಲಿ ಮಾನ್ಯ ವಿರೋಧಪಕ್ಷದ ನಾಯಕರು ಆಯವ್ಯಯದ ಮೇಲೆ ಚರ್ಚಿಸುವಾಗ ಇಲಾಖಾವಾರು ಕಾರ್ಯ ನಿರ್ವಹಣಾ ವರದಿ ಹಾಗೂ ವಾರ್ಷಿಕ ವರದಿಗಳ ಅವಶ್ಯವಿದ್ದು, ಅವುಗಳನ್ನು ಸರ್ಕಾರವು ಒದಗಿಸಿಕೊಡಬೇಕೆಂದು ಕೋರಿರುತ್ತಾರೆ. ಆಯವ್ಯಯವನ್ನು ಮಂಡಿಸಿದ ನಂತರ ನಿಯಮಾವಳಿಗನುಸಾರವಾಗಿ ಮೊದಲನೆ ಹಂತದಲ್ಲಿ ಆಯವ್ಯಯದ ಮೇಲೆ ಸಾಮಾನ್ಯ ಚರ್ಚೆ ನಡೆಯುತ್ತದೆ. ಈ ಹಂತದಲ್ಲಿ ಕಾರ್ಯನಿರ್ವಹಣಾ ವರದಿಯನ್ನು ಒದಗಿಸುವುದು ಕಡ್ಡಾಯವೇ? ಎಂಬ ಪ್ರಶ್ನೆ ಉದ್ಭವಿಸಿರುತ್ತದೆ. ಸಾಮಾನ್ಯವಾಗಿ ಆಯವ್ಯಯವನ್ನು ಮಂಡಿಸಿದ ನಂತರ ಅದರ ಮೇಲೆ ಸಾಮಾನ್ಯ ಚರ್ಚೆ ನಡೆಯುತ್ತಿದ್ದು, ಅದರಲ್ಲಿ ಕೇವಲ ಸರ್ಕಾರದ ಆರ್ಥಿಕ ನೀತಿಗಳ ಕುರಿತು ಚರ್ಚೆಯಾಗುತ್ತದೆ. ತದನಂತರ ಸರ್ಕಾರದ ಹಣಕಾಸಿನ ಸಚಿವರು ಉತ್ತರಿಸಿ, ಲೇಖಾನುದಾನ ಕೋರಲಾಗಿ, ಈ ಸಂಬಂಧ ಹಣಕಾಸಿನ ಮಸೂದೆಗಳು ಮಂಡಿಸಲ್ಪಟ್ಟು ಅಂಗೀಕರಿಸಲ್ಪಡುತ್ತವೆ. ಆದರೆ, ಸರ್ಕಾರವು ಇಲಾಖಾವಾರು ಅನುದಾನಗಳಿಗೆ ಸಬಂಧಿಸಿದ ಬೇಡಿಕೆಗಳನ್ನು ಮಂಡಿಸಿ ಸದನದ ಅನುಮೋದನೆಯನ್ನು ಪಡೆದುಕೊಳ್ಳುವಾಗ ಪ್ರತಿಯೊಂದು ಇಲಾಖೆಯ ಅನುದಾನ ಬೇಡಿಕೆಯ ಕುರಿತು ವಿವರವಾಗಿ ಸದನದಲ್ಲಿ ಚರ್ಚೆಯಾಗುತ್ತದೆ. ಆ ಸಂದರ್ಭದಲ್ಲಿ ಆ ಇಲಾಖೆಯ ಹಿಂದಿನ ಕಾರ್ಯನಿರ್ವಹಣೆ ಹೇಗಿರುತ್ತದೆ ಎಂಬುದನ್ನು ಅಧ್ಯಯನ ಮಾಡಿ ಮಾನ್ಯ ಸದಸ್ಯರುಗಳು ಚರ್ಚೆಯಲ್ಲಿ ಭಾಗವಹಿಸಬೇಕಾಗಿರುವುದರಿಂದ ಆ ಸಂದರ್ಭದಲ್ಲಿ ಇಲಾಖೆಗಳ ಕಾರ್ಯನಿರ್ವಹಣಾ ವರದಿಗಳ ಅವಶ್ಯಕತೆಯಿರುತ್ತದೆ. ಪ್ರಸ್ತುತ ಸಂದರ್ಭದಲ್ಲಿ 2015–16ನೇ ಸಾಲಿನ ಆಯವ್ಯಯವನ್ನು ಮಂಡಿಸಿದ್ದು, ಜುಲೈ 31ರವರೆಗೆ ಅಂದರೆ ನಾಲ್ಕು ತಿಂಗಳಿಗೆ ಲೇಖಾನುದಾನವನ್ನು ಕೋರಲಾಗಿರುತ್ತದೆ. ಈಗ ಅದರ ಮೇಲೆ ಸಾಮಾನ್ಯ ಚರ್ಚೆಯನ್ನು ಮಾತ್ರ ನಿಗದಿಪಡಿಸಲಾಗಿರುತ್ತದೆ. ಜುಲೈ ನಂತರ ಇಲಾಖಾವಾರು ಅನುದಾನದ ಬೇಡಿಕೆಗಳನ್ನು ಮಂಡಿಸಿದಾಗ ಇಲಾಖಾವಾರು ವಾರ್ಷಿಕ ವರದಿ ಮತ್ತು ಕಾರ್ಯನಿರ್ವಹಣಾ ಮುಂಗಡ ಪತ್ರಗಳನ್ನು

(Performance Budget) ಒದಗಿಸಬಹುದಾಗಿದೆ. ಮುಂದಿನ ಅಧಿವೇಶನದಲ್ಲಿ ಇಲಾಖಾ ಬೇಡಿಕೆಗಳ ಮೇಲೆ ಚರ್ಚೆ ನಡೆಯಲಿರುವುದರಿಂದ, ಇಲಾಖಾವಾರು ವಾರ್ಷಿಕ ವರದಿ ಮತ್ತು ನಿರ್ವಹಣಾ ಮುಂಗಡ ಪತ್ರಗಳನ್ನು ಸಾಕಷ್ಟು ಮುಂಚಿತವಾಗಿ ನೀಡಬೇಕೆಂದು ಈ ಮೂಲಕ ಸೂಚಿಸುತ್ತಿದ್ದೇನೆ."

ಶ್ರೀ ಜಗದೀಶ್ ಶೆಟ್ಟರ್:– ಮಾನ್ಯ ಅಧ್ಯಕ್ಷರೆ, ಅದು ತಮ್ಮ ruling ನಿಂದ ಒಂದು precedent ಆಗಲಿ ಎಂದೇ ನಿನ್ನೆ ನಾನು ಹೇಳಿದೆ. ಏಕೆಂದರೆ ಹಿಂದೆ ನಾವು ಈ ಬಗ್ಗೆ ವಾದ ಮಾಡಿದಾಗ ಆ ರೀತಿ ಇಲ್ಲವೆಂದು ಹೇಳಿದವರು ಇಲ್ಲೇ ಇದ್ದಾರೆ. ಅದಕ್ಕಾಗಿ ತಮ್ಮದು ಒಂದು ruling ಇರಲಿ. ಆ ರೀತಿ ಒಂದು precedent ಆಗಲಿ ಎಂಬ ಉದ್ದೇಶದಿಂದ ಹೇಳಿದ್ದೆವು, ತಾವು ಹೇಳಿರುವುದನ್ನು ನಾವು ಒಪ್ಪಿಕೊಳ್ಳುತ್ತೇವೆ. ಆ ಪರಂಪರೆ ಮುಂದುವರೆಯಲಿ, ಪದೇಪದೇ ಸದನದಲ್ಲಿ ಅದೇ ಪರಿಸ್ಥಿತಿ ಬರುವುದು ಬೇಡ.

ಅಧ್ಯಕ್ಷರು:– ಇಲ್ಲಿ ಒಂದು ಏನು ಸನ್ನಿವೇಶ ನಿರ್ಮಾಣವಾಗಿದೆ ಎಂದರೆ..

ಶ್ರೀ ಜಗದೀಶ್ ಶೆಟ್ಟರ್:– ಆದರೆ ಹಿಂದೆ ಏನಾಗಿತ್ತು ಎಂಬ ಬಗ್ಗೆ ತಾವೆಲ್ಲಾ record ನೋಡಿದ್ದೀರಿ. ಯಾರು insist ಮಾಡಿದರು? ವಿರೋಧ ಪಕ್ಷದ ನಾಯಕರಾಗಿದ್ದಾಗ ಏನು insist ಮಾಡಿದರು ಎಂಬುದೆಲ್ಲಾ ತಮ್ಮ ಗಮನಕ್ಕೆ ನಿನ್ನೇ ಬಂದಿದೆ ಎಂದು ನಾನು ತಿಳಿದುಕೊಂಡಿದ್ದೇನೆ.

ಅಧ್ಯಕ್ಷರು:– ಆಯಿತು.

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್:– ನಿನ್ನೆ ನಡೆದಿರುವ ಘಟನೆ ಬಗ್ಗೆ ಒಂದು ನಿಲುವಳಿ ಸೂಚನೆ ಕೊಟ್ಟಿದ್ದೇನೆ.

(ಗೊಂದಲ)

3. ನಿಯಮ 69ರ ಮೇರೆಗೆ ಸಾರ್ವಜನಿಕ ಮಹತ್ವದ ಜರೂರು ವಿಷಯದ ಬಗ್ಗೆ ಅಲ್ಪಕಾಲಾವಧಿ ಚರ್ಚೆ

(ಈ ಹಂತದಲ್ಲಿ ವಿರೋಧ ಪಕ್ಷಗಳಾದ ಬಿಜೆಪಿ ಮತ್ತು ಜೆಡಿಎಸ್ ಪಕ್ಷದ ಮಾನ್ಯ ಸದಸ್ಯರುಗಳು ಎಲ್ಲರು ಒಟ್ಟಿಗೆ ಎದ್ದು ನಿಂತು ಮಾತನಾಡುತ್ತಿದ್ದರು)

ವಿಷಯ:– ಶ್ರೀ ಡಿ.ಕೆ. ರವಿ. ಐ.ಎ.ಎಸ್ ಅಧಿಕಾರಿಯ ನಿಗೂಢ ಸಾವಿನ ಬಗ್ಗೆ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ:– ಅಧ್ಯಕ್ಷರೆ, ಸದನದಲ್ಲಿ ಮಾನ್ಯ ಮುಖ್ಯಮಂತ್ರಿಗಳು ಇಲ್ಲ, Home Minister ಇಲ್ಲ.

ಶ್ರೀ ಆರ್.ವಿ. ದೇಶಪಾಂಡೆ (ಮಾನ್ಯ ಉನ್ನತ ಶಿಕ್ಷಣ ಮತ್ತು ಪ್ರವಾಸೋದ್ಯಮ ಸಚಿವರು):– ಎಲ್ಲರೂ ಒಟ್ಟಿಗೆ ಮಾತನಾಡಿದರೆ ಹೇಗೆ?

(ಗೊಂದಲ)

ಶ್ರೀ ಸಿ.ಟಿ. ರವಿ:– ಶ್ರೀ ಡಿ.ಕೆ. ರವಿಯವರ ಸಾವಿನ ಹಿಂದೆ ಕಾಣದ ಕೈಗಳು ಕೆಲಸ ಮಾಡಿವೆ.

(ಗೊಂದಲ)

ಶ್ರೀ ಸಿ.ಟಿ. ರವಿ:– ರವಿಯವರ ಸಾವಿನ ಹಿಂದೆ ಕಾಣದ ಕೈಗಳು ಕೆಲಸ ಮಾಡಿವೆ, ಇದರ ಬಗ್ಗೆ ತನಿಖೆಯಾಗಬೇಕು. ದೊಡ್ಡ ಮಾಫಿಯಾ ಇದರ ಹಿಂದೆ ಇದೆ.

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್:– ಈ ಬಗ್ಗೆ ನಾವು ನಿಲುವಳಿ ಸೂಚನೆಯನ್ನು ಕೊಟ್ಟಿದ್ದೇವೆ. ಇಡೀ ರಾಜ್ಯದಲ್ಲಿ ಈ ಬಗ್ಗೆ ಚರ್ಚೆಯಾಗುತ್ತಿದೆ.

(ಗೊಂದಲ)

ಶ್ರೀ ಆರ್.ವಿ. ದೇಶಪಾಂಡೆ:– Home Minister ಬಂದಿದ್ದಾರೆ. ಅವರು ಹೇಳಿಕೆಯನ್ನು ಕೊಡುತ್ತಾರೆ.